ನಾಗಮಣಿ

ಪಿ**ಡಬ್ಲ್ಯೂ-1**

**ದಿನಾಂಕ 20.09.2024 ರಂದು** ಸಾಕ್ಷಿಗೆ **ಪ್ರಮಾಣ ವಚನ ಬೋಧಿಸಲಾಯಿತು.**
ಪಾಟಿ ಸವಾಲು ಪ್ರತಿವಾದಿಯರ ಪರ ಶ್ರೀ ಸಿ ಎಸ್ ಎಸ್ **ವಕೀಲರವರಿಂದಃ**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನ್ನ ಗಂಡನ ಹೆಸರು ಮಂಜುನಾಥ. ನಾನು ನಾರ್ತ್ ಬ್ಯಾಂಕ್ ಗ್ರಾಮದವರು ಎಂದರೆ ಸರಿ. ನಾನು ಮದುವೆಯಾದಾಗಿನಿಂದಲೂ ನಾರ್ತ್ ಬ್ಯಾಂಕ್ ಗ್ರಾಮದಲ್ಲಿ ವಾಸವಾಗಿದ್ದೇನೆ. ನನನ ಮಾವ ಶಿವರಾಮೇಗೌಡ. ನನ್ನ ಗಂಡ ಕಟ್ಟೇರಿ ಗ್ರಾಮ ಪಂಚಾಯತಿಯಲ್ಲಿ ವಾಟರ್ ಮೆನ್ ಆಗಿ ಕೆಲಸ ಮಾಡುತ್ತಾರೆ. ನನ್ನ ಗಂಡನ ಪೂರ್ವಾರ್ಜಿತವಾಗಿ ಮನೆ ಇದೆ ಎಂದರೆ ಸರಿ.

2. ನಾನು 2004 ರಲ್ಲಿ ನಿವೇಶನ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನನ್ನೊಂದಿಗೆ ಬೇರೆ ಯಾರು ಅರ್ಜಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ನಿವೇಶನ ಕೋರಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಅರ್ಜಿಯ ಮೇಲೆ ಗ್ರಾಮ ಪಂಚಾಯತಿಯಲ್ಲಿ ನಡೆದಿರುವ ಸಭಾ ನಡುವಳಿಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. ದಾವಾ ಸ್ವತ್ತಿನ ನಿವೇಶನವು ಪಂಚಾಯತಿಗೆ ಸೇರಿರುವ ನಿವೇಶನವಾಗಿರುತ್ತದೆ. ನಮ್ಮ ನಿವೇಶನದಜಾಗವು ಪಂಚಾಯತಿಗೆ ಸೇರಿದೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಎಷ್ಟು ಮೊತ್ತದ ಕಿಮ್ಮತ್ತನ್ನು ಪಂಚಾಯತಿಗೆ ಪಾವತಿ ಮಾಡಿದ್ದೀರಾ ಎಂದರೆ ಸಾಕ್ಷಿಯು ನಮ್ಮ ಮನೆ ಬಿದ್ದು ಹೋಗಿತ್ತು, ಪಂಚಾತಿಯತಿಗೆ ಅರ್ಜಿ ಸಲ್ಲಿಸಿದ್ದು, ರೂ 1000/- ಪಂಚಾತಿಯತಿಗೆ ಕಟ್ಟಿರುತ್ತೇನೆ. ಪಂಚಾತಿಯಿಂದ ನನಗೆ ಹಕ್ಕು ಪತ್ರ ಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೆ.

4. ನನ್ನ ಗಂಡ ಕಟ್ಟೇರಿ ಗ್ರಾಮ ಪಂಚಾಯತಿಯಲ್ಲಿ ಸುಮಾರು 5 ವರ್ಷಗಳಿಂದ ವಾಟರ್ ಮೆನ್ ಆಗಿ ಕೆಲಸ ಮಾಡುತ್ತಾರೆ. ನನ್ನ ಗಂಡ ಸುಮಾರು 5 ವರ್ಷಗಳಿಂದಲೂ ಕಟ್ಟೇರಿ ಗ್ರಾಮ ಪಂಚಾಯತಿಯಲ್ಲಿ ಹೊರಗುತ್ತಿಗೆದಾರರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಗ್ರಾಮ ಪಂಚಾಯತಿಗೆ ನಿವೇಶನ ಕೋರಿ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿ ಸಲ್ಲಿಸದೇ ಇರುವ ಕಾರಣ ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 6 ದಾಖಲೆಗಳನ್ನು ನನ್ನಗಂಡ ಪಂಚಾಯತಿಯವರೊಂದಿಗೆ ಶಾಶಿಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

5. ನನಗೆ ಮಂಜೂರಾಗಿರುವ ನಿವೇಶನ ನಂಬರ 760. ಗ್ರಾಮ ಪಂಚಾಯತಿಗೆ ನಮಗೆ ಮಂಜೂರು ಮಾಡಿದಾಗ ರಸ್ತೆ ನಿರ್ಮಾಣವಾಗಿತ್ತಾ ಎಂದರೆ ಸಾಕ್ಷಿ ಈಗ 5 ವರ್ಷಗಳ ಹಿಂದೆ ಮಾಡಿರುತ್ತಾರೆ. ಸದರಿ ನಿವೇಶನಗಳಿಗೆ ವಿದ್ಯೂತ್ ಸಂಪರ್ಕ ಇದೆಯಾ ಎಂದರೆ ಸಾಕ್ಷಿಯು ವಿದ್ಯೂತ್ ಕಂಬಗಳನ್ನು ಹಾಕಿರುತ್ತಾರೆ, ಇನ್ನೂ ವಿದ್ಯೂತ್ ಸಂಪರ್ಕ ಕಲ್ಪಿಸಿಲ್ಲ. ದಾವಾ ಸ್ವತ್ತು ಕೃಷಿ ಭೂಮಿಯಾಗಿದ್ದು ಯಾವುದೇ ನಿವೇಶನಗಳನ್ನು ಮಾಡಿರುವುದಿಲ್ಲ, ರಸ್ತೆ ಇರುವುದಿಲ್ಲ, ವಿದ್ಯೂತ್ ಸಂಪರ್ಕ ಇರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟಿ ಸವಾಲಿಗೆ ಸಮಯಾವಕಾಶ ನೀಡಲಾಗಿದೆ.
**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜೆಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾಂಡವಪುರ